**ಸಿ.ಸಿ.ನಂಃ 35341 / 2021 ಪಿ ಡಬ್ಲೂಃ 1**

**ದಿನಾಂಕಃ 04-03-2025 ರಂದು ಸಾಕ್ಷಿಯನ್ನು ಕೂಗಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಆರೋಪಿ ಪರ ಶ್ರೀ. ಮಾನ್ಯ ವಕೀಲರಿಂದ :**

ಮೇಲೆ ಹೇಳಿದಂತಹ ಬಟ್ಟೆಯ ಅಂಗಡಿಯ ಹೆಸರು ಫೆಮಿನಾ ಪ್ಯಾಷನ್ಸ್ ಇದ್ದು ಅದರ ವಿಳಾಸ ಸಂಖ್ಯೆ 141, 13ನೇ ಅಡ್ಡರಸ್ತೆ ,27ನೇ ಮುಖ್ಯ ರಸ್ತೆ , 3 ನೇ ಬ್ಲಾಕ್ ಜಯನಗರ ಬೆಂಗಳೂರು-11 ಇರುತ್ತದೆ. ಕೊವಿಡ್ 19 ಪ್ರಯುಕ್ತ ಈ ಅಂಗಡಿಯನ್ನು 2019 ನಲ್ಲಿ ಬಂದ್ ಮಾಡಿರುತ್ತೇವೆ. ನಮಗೆ ಮೇಲೆ ಹೇಳಿದಂತಹ ಅಂಗಡಿ ಇರುತ್ತದೆ ಎಂದು ನನಗೆ ಅಂಗಡಿಯಿಂದ ರೂ 15 ಲಕ್ಷ ವಾರ್ಷಿಕ ಆದಾಯ ಇರುತ್ತದೆ ಎಂದು ಸುಳ್ಳು ಸಾಧನೆ ಮಾಡುತ್ತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮೇಲೆ ಹೇಳಿದಂತಹ ವಿಳಾಸಕ್ಕೆ ಸಂಬಂದ ಪಟ್ಟಂತೆ ಬಿಬಿಎಂಪಿ ರವರು ನೀಡಿರುವ ಪರವಾಣಿಗೆಯನ್ನು ತೋರಿಸಿ ಈಗ ಹೇಳಿದ ವಿಳಾಸಕ್ಕೆ ಸಂಬಂದ ಪಟ್ಟಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾ ನಾವು ದಾವಣೆಗೆ ಬೆಣ್ಣೆ ದೋಸೆ ಅಂಗಡಿಯನ್ನು ಕೂಡಾ ವಿಳಾಸದಲ್ಲಿ ಇಟ್ಟಿದ್ದೇವು ಅದು ನಷ್ಟಕ್ಕೆ ಒಳಗಾದ ಕಾರಣ ಅದು ಬಂದ್ ಆಗಿರುತ್ತದೆ ಎಂದು

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-3.pdf

ನುಡಿಯುತ್ತಾರೆ. ಸಾಕ್ಷಿಯು ದಾಖಲೆಯನ್ನು ಒಪ್ಪಿದ ಕಾರಣ ನಿಡಿ 2 ಎಂದು ಗುರುತಿಸಲಾಯಿತು. ಸದರಿ ಜಾಗದ ದಾವಣಗೆ ಬೆಣ್ಣೆ ದೋಸೆ ಎಂದು ಇರುವ ಪ್ಲೆಕ್ಸ್ ಬೋಡ್ ಅನ್ನು ಚಾಯಾ ಚಿತ್ರವನ್ನು ತೋರಿಸಿದ್ದು ಅದನ್ನು ಸಾಕ್ಷಿ ಒಪ್ಪಿದ ಕಾರಣ ನಿಡಿ 3 ಎಂದು ಗುರುತಿಸಲಾಯಿತು. 2019 ನೇ ಸಾಲಿನ ವರೆಗೂ ನಾನು ಬಟ್ಟೆ ಅಂಗಡಿ ಹೊಂದಿದ್ದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದ ಹಾಜರು ಪಡಿಸಲು ತೊಂದರೆ ಇಲ್ಲ ಎಂದು ನುಡಿಯುತ್ತಾರೆ . ನಾನು ಹಾಲಿ ಜಯನಗದರಲ್ಲಿ ಯಾವುದೇ ಅಂಗಡಿಯನ್ನು ಅಥವಾ ವ್ಯಾಪಾರವನ್ನು ಹೊಂದಿರುವುದಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲಃ**

**(ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**22 ನೇ ಅಪರ ಮು. ಮ. ದಂ.,**

**ಬೆಂಗಳೂರು ನಗರ.**

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-3.pdf

www.ecourtsindia.com